# ನಿಮ್ಮೊಡನೆ

ಯುವಜನರ ನಡುವಣ ಆಪ್ತ ಸಂದೇಶಗಳ ರಹಸ್ಯ ವಿನಿಮಯಕ್ಕೂ ರಹದಾರಿಯಾಗಿದ್ದ ಮೊಬೈಲ್ ಇದೀಗ ಕಿರುಸಂದೇಶಗಳ ವಿಷಯದಲ್ಲಿ ನಿರ್ಬಂಧಕ್ಕೆ ಒಳಗಾಗಿದೆ. ಮಾರುಕಟ್ಟೆಯ ಪ್ರಚಾರ ತಂತ್ರವಾಗಿ ಮೊಬೈಲ್‌ಗಳಿಗೆ ಹೊತ್ತುಗೊತ್ತಿಲ್ಲದೆ ರವಾನೆಯಾಗುವ ವ್ಯಾಪಾರ ಸಂಬಂಧಿ ಕರೆ ಸಂದೇಶಗಳಿಗೆ ಕಡಿವಾಣ ಬಿದ್ದಿದೆ.




## ಸಂವಹನದಲ್ಲಿ ಕ್ರಾಂತಿ

ಕಳೆದ ಒಂದು ದಶಕದಲ್ಲಿ ಸಂಪರ್ಕ ಕ್ಷೇತ್ರದಲ್ಲಿ ಆಗಿರುವ ಬದಲಾವಣೆ ತುಂಬ ಕ್ರಾಂತಿಕಾರಕವಾದದ್ದು. ಉಪಗ್ರಹ ಆಧರಿಸಿ ನಡೆಸುತ್ತಿದ್ದ ದೂರದರ್ಶನ ಪ್ರಸಾರ ಮನರಂಜನೆ ಕ್ಷೇತ್ರದ ಸಾಧ್ಯತೆಯನ್ನು ವಿಸ್ತರಿಸಿತ್ತು. ಮನರಂಜನೆ ಮತ್ತು ಜ್ಞಾನ ಪ್ರಸಾರವನ್ನು ಉದ್ದೇಶಿಸಿದ ದೂರದರ್ಶನ ನೂರಾರು ವಾಹಿನಿಗಳ ಅಸ್ತಿತ್ವಕ್ಕೆ ಪ್ರೇರಕವಾಯಿತು. ಬಂಡವಾಳ ಹೂಡಿ ಲಾಭ ಪಡೆಯುವ ಉದ್ಯಮ ಕ್ಷೇತ್ರವಾಗಿಯೂ ಬೆಳೆಯಿತು. ಭಾರತದಲ್ಲಂತೂ ಇದು ಸರ್ಕಾರಿ ಪ್ರಸಾರ ವ್ಯವಸ್ಥೆಯನ್ನು ನೇಪಥ್ಯಕ್ಕೆ ಸರಿಸುವಷ್ಟು ಪ್ರಭಾವಶಾಲಿಯಾಗಿ ಜನಪ್ರಿಯತೆ ಗಳಿಸಿಕೊಂಡಿತು. ಖಾಸಗಿಯವರ ಪ್ರವೇಶಕ್ಕೆ ಮುಕ್ತ ಅವಕಾಶವನ್ನು ತೆರೆದ ಪರಿಣಾಮವಾಗಿ ದೂರದರ್ಶನ ವ್ಯವಸ್ಥೆ ಯಾವುದೇ ವ್ಯವಹಾರ ಕ್ಷೇತ್ರದಲ್ಲಿ ಇರುವ ಆರೋಗ್ಯಕರ ಸ್ಪರ್ಧೆ, ಗುಣಮಟ್ಟದ ಕಾಳಜಿ ಮತ್ತು ಅರ್ಹತೆಯಷ್ಟೆ ಮಹತ್ವದ್ದಾಗುವ ಕಾರ್ಪೊರೇಟ್ ಸ್ವರೂಪವನ್ನು ಪಡೆದುಕೊಂಡಿತು. ಹೆಚ್ಚು ಹೆಚ್ಚು ಜನ ಬಳಕೆದಾರರಾಗಿ ಪರಿವರ್ತನೆಯಾಗುವಂತೆ ಮಾಡಿರುವ ಈ ಬದಲಾವಣೆ ಭಾರತೀಯ ಸಮೂಹ ಸಂವಹನ ಮತ್ತು ಮನರಂಜನಾ ಕ್ಷೇತ್ರದ ಸ್ವರೂಪವನ್ನೇ ಬದಲಿಸಿದೆ. ಸಾವಿರಾರು ಜನರಿಗೆ ಉದ್ಯೋಗ ಕಲ್ಪಿಸಿ, ಹೂಡಿದ ಬಂಡವಾಳಕ್ಕೆ ನಿರೀಕ್ಷೆಗೂ ಮೀರಿದ ಪ್ರತಿಫಲ ಕೊಡುವಂತೆ ಮಾಡಿರುವ ಈ ಬೆಳವಣಿಗೆ ಬೆರಗು ಮೂಡಿಸುವಂಥದ್ದು.

ಉಪಗ್ರಹ ಆಧರಿಸಿದ ಸಂಪರ್ಕ ವ್ಯವಸ್ಥೆ ಮಾಹಿತಿ ಮತ್ತು ಮನರಂಜನೆ ಕ್ಷೇತ್ರದಲ್ಲಿ ಮಾಡಿರುವ ಬದಲಾವಣೆಗಿಂತ ವೈಯಕ್ತಿಕ ಮಟ್ಟದ ಸಂಪರ್ಕ ವ್ಯವಸ್ಥೆಯಲ್ಲಿ ಮಾಡಿರುವ ಬದಲಾವಣೆ ಕ್ರಾಂತಿಕಾರಕ ಸ್ವರೂಪದ್ದು. ಇಪ್ಪತ್ತೊಂದನೆಯ ಶತಮಾನದ ಮೊದಲ ದಶಕ ಈ ಸುಧಾರಣೆಗಾಗಿ ಇತಿಹಾಸದಲ್ಲಿ ದಾಖಲಾಗುತ್ತದೆ. ಉಪಗ್ರಹ ಆಧರಿಸಿದ್ದೇ ಆದರೂ ಪ್ರತಿ ವ್ಯಕ್ತಿಯನ್ನೂ ಎಲ್ಲೆಂದರಲ್ಲಿ, ಹೊತ್ತುಗೊತ್ತಿನ ಪರಿವೆ ಇಲ್ಲದೆ ನೇರವಾಗಿ ಸಂಪರ್ಕಿಸುವಂಥ ಮೊಬೈಲ್ ದೂರವಾಣಿ ಈ ಐತಿಹಾಸಿಕ ಸಾಧನೆಯ ವಾಮನ ಆಕೃತಿ. ವಿದ್ಯುನ್ಮಾನ ಕ್ಷೇತ್ರದಲ್ಲಿ ನಡೆಸಿದ ಸತತ ಸಂಶೋಧನೆಗಳಿಂದ ಅಂಗೈಯಲ್ಲಿ ಜಗತ್ತಿನೊಂದಿಗೆ ಸಂಪರ್ಕ ಇಟ್ಟುಕೊಳ್ಳುವಂಥ ಮೊಬೈಲ್ ಉಪಕರಣ ಹಲವು ಕೆಲಸಗಳನ್ನೂ ನಿರ್ವಹಿಸುವಂಥ ಬಹುರೂಪಿಯಾಗಿದ್ದು ಅದು ತಾಂತ್ರಿಕತೆಯ ತ್ರಿವಿಕ್ರಮ ಹೆಜ್ಜೆ. ದೂರವಾಣಿಯಂತೆ ಸಂಭಾಷಣೆಗೆ ವಾಹಕವಾಗಿಯಷ್ಟೆ ಅಲ್ಲದೆ, ಛಾಯಾಗ್ರಹಣ, ಧ್ವನಿಗ್ರಹಣಗಳೂ ಸೇರಿದಂತೆ ಹಲವು ಬಗೆಯ ಸಂಕೀರ್ಣ ಕೆಲಸಗಳನ್ನು ನಿರ್ವಹಿಸುವಂಥ ಕಂಪ್ಯೂಟರಿನ ಸಾಮರ್ಥ್ಯವನ್ನು ಗಳಿಸಿದ ಮೊಬೈಲ್ ಸಲಕರಣೆ ಇಂದು ದೇಶದಲ್ಲಿ ಅತ್ಯಂತ ಪರಿಚಿತ. ನಗರ ಪ್ರದೇಶಗಳಲ್ಲಷ್ಟೆ ಅಲ್ಲದೆ, ಗ್ರಾಮೀಣ ಭಾಗದಲ್ಲಿ, ಶ್ರೀಮಂತ ಬಡವರೆಂಬ ಭೇದಕ್ಕೆ ಎಡೆ ಇಲ್ಲದಂತೆ ಎಲ್ಲ ವರ್ಗದವರ ಸಂಪರ್ಕ ಸೇತುವಾಗಿ ಬಳಕೆಗೆ ಬಂದಿದೆ.

ಮೊಬೈಲ್ ಬಳಸಿ ನಡೆಸುತ್ತಿರುವ ವ್ಯವಹಾರಗಳಲ್ಲಿ ಸಂಕ್ಷಿಪ್ತ ರೂಪದಲ್ಲಿ ಸಂದೇಶ ಕಳುಹಿಸುವ 'ಎಸ್‌ಎಂಎಸ್' ಬಹು ಜನಪ್ರಿಯ. ವ್ಯವಹಾರ ಸಂಬಂಧಿಯಾಗಿಯಷ್ಟೇ ಅಲ್ಲದೆ, ಇಬ್ಬರ ನಡುವಣ ರಹಸ್ಯ ಸಂದೇಶ ವಿನಿಮಯಕ್ಕೆ ಆಸ್ಪದ ನೀಡಿದ ವ್ಯವಸ್ಥೆ ಎಷ್ಟು ಜನಪ್ರಿಯವಾಗಿದೆ ಎಂದರೆ ಅದನ್ನು ನಿರ್ಬಂಧಿಸುವ ಅನಿವಾರ್ಯತೆಯನ್ನು ದೂರಸಂಪರ್ಕ ವ್ಯವಸ್ಥೆಯನ್ನು ನಿಯಂತ್ರಿಸುವ ಪ್ರಾಧಿಕಾರವೇ ಮನಗಾಣುವಂತಾಗಿದೆ. ಮಾತಿನ ಸಂಪರ್ಕಕ್ಕೆ ರೂಪಿಸಲಾಗಿರುವ ಉಪಕರಣ ಕಿರು ಸಂದೇಶಗಳ ವಿನಿಮಯದ ಮೂಲಕ ನವೀನ ರೀತಿಯ ಪತ್ರ ವ್ಯವಹಾರಕ್ಕೆ ವಾಹಕವಾಗಿದ್ದು ಇನ್ನಷ್ಟು ಸಾಧ್ಯತೆಗಳಿಗೆ ತೆರೆದುಕೊಂಡಿದೆ. ವ್ಯವಹಾರಕ್ಕೆ ತೆರೆದ ಅವಕಾಶ ವ್ಯಾಪಾರಿ ತಂತ್ರವಾಗಿ ಬಳಕೆಯಾಗತೊಡಗಿದಾಗ ಅದು ಸಾಮಾಜಿಕ ಪಿಡುಗಾಗಿ ಪರಿಣಮಿಸಿದೆ. ಆದ್ದರಿಂದಲೇ ದೂರಸಂಪರ್ಕದ ಸಕ್ಷಮ ಪ್ರಾಧಿಕಾರ (ಟ್ರಾಯ್) ದಿನಕ್ಕೆ ನೂರು ಎಸ್‌ಎಂಎಸ್‌ಗಳಷ್ಟಕ್ಕೆ ಸೇವೆಯನ್ನು ನಿರ್ಬಂಧಿಸಿದೆ. ಹದಿಹರಯದ ಯುವಜನರ ನಡುವಣ ಆಪ್ತ ಸಂದೇಶಗಳ ರಹಸ್ಯ ವಿನಿಮಯಕ್ಕೂ ರಹದಾರಿಯಾಗಿದ್ದ ಮೊಬೈಲ್ ಇದೀಗ ಕಿರುಸಂದೇಶಗಳ ವಿಷಯದಲ್ಲಿ ನಿರ್ಬಂಧಕ್ಕೆ ಒಳಗಾಗಿದೆ. ಮಾರುಕಟ್ಟೆಯ ಪ್ರಚಾರ ತಂತ್ರವಾಗಿ ಮೊಬೈಲ್‌ಗಳಿಗೆ ಹೊತ್ತುಗೊತ್ತಿಲ್ಲದೆ ರವಾನೆಯಾಗುವ ವ್ಯಾಪಾರ ಸಂಬಂಧಿ ಕರೆ ಸಂದೇಶಗಳಿಗೆ ಕಡಿವಾಣ ಬಿದ್ದಿದೆ.

ಕಿರು ಸಂದೇಶ ರವಾನೆಯ ಸಾಧ್ಯತೆಯನ್ನು ವೃತ್ತಿಪರವಾಗಿ ಬಳಸಿಕೊಳ್ಳುವವರಿಗೆ ಈ ನಿರ್ಬಂಧ ಅನಗತ್ಯವಾಗಿರುವ ಕ್ರಮ. ಅನಿರ್ಬಂಧಿತ ಸಂದೇಶ ರವಾನೆಯ ಸಾಧ್ಯತೆಯನ್ನು ಅಧಿಕೃತಗೊಳಿಸುವ ಉನ್ನತ ಗ್ರಾಹಕ ವರ್ಗವನ್ನು ಹೊಸದಾಗಿ ಸೃಷ್ಟಿಸಿ ಅದರಿಂದಲೂ ಆದಾಯ ಹೆಚ್ಚಿಸಿಕೊಳ್ಳುವ ಮಾರ್ಗವನ್ನು ಕೈಬಿಟ್ಟು ಕರೆಗಳ ಕಿರಿಕಿರಿಯನ್ನು ನಿವಾರಿಸಿಕೊಳ್ಳುವ ಅನಿಷ್ಟ ಪರಿಹಾರದ ಕ್ರಮವಾಗಿ ತಾಂತ್ರಿಕತೆಯ ಸಾಧ್ಯತೆಯನ್ನು ನಿರ್ಲಕ್ಷಿಸುವ ಇಂಥ ಕ್ರಮ ವ್ಯಾವಹಾರಿಕವಾಗಿ ಜಾಣತನದ್ದಲ್ಲ.

■ ಲಕ್ಷ್ಮಣ ಕೊಡಸೆ